ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-5 Issue 2, September-October, 2023, Pp. 1-8.
©IIMRD, Mysuru

IIMRD JOURNALS
www.iimrd.com

# ಹಂಪಿಯ ಸ್ಮಾರಕಗಳು ಹಾಗೂ ಆದಿಮ ನೆಲೆಗಳು

**ಡಾ.ಚಲುವರಾಜು***

*ಪ್ರಾಧ್ಯಾಪಕರು, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

**ಸಾರಾಂಶ: (Abstract)**

*ವಿಜಯನಗರದ ರಾಜಧಾನಿಯ ಸ್ಥಳವಾದ ಹಂಪಿ, ಪೌರಾಣಿಕ ಹಾಗೂ ಪುಣ್ಯಕ್ಷೇತ್ರದ ಹಿನ್ನೆಲೆಯಲ್ಲಿ ರಾಮಾಯಣದ ಕಿಷ್ಕಿಂದಾ ಪ್ರದೇಶವಾಗಿ, ಸೃಷ್ಟಿ ಪುರಾಣಗಳ ನೆಲೆಯಾಗಿ, ಪಂಪಾಕ್ಷೇತ್ರವಾಗಿ, ಪ್ರಾಚೀನತೆಯನ್ನು ಪಡೆದುಕೊಂಡಿದೆ. ಅನಂತರದಲ್ಲಿ ಆನೆಗೊಂದಿ, ವಿರೂಪಾಕ್ಷಪುರ, ಹೊಸಪಟ್ಟಣ, ಹೊಸಹಂಪೆಯ ಪಟ್ಟಣ, ಹಸ್ತಿನಾವತಿ, ಕೂಜರಕೋಣ. ವಿದ್ಯಾನಗರ, ಹಂಪಿ, ಇತ್ಯಾದಿ ಹೆಸರುಗಳಿಂದ ಕರೆಯಲ್ಪಟ್ಟಿದೆ. ಪೌರಾಣಿಕ ಧಾರ್ಮಿಕ ಐತಿಹಾಸಿಕ ಹಿನ್ನೆಲೆಯಲ್ಲಿ ಹೆಚ್ಚಿನ ಮಹತ್ವಪಡೆದ ಈ ನೆಲೆ ಸಾಮ್ರಾಜ್ಯವೊಂದರ ಸ್ಥಾಪನೆಯ ಆಯಾಮಕ್ಕೆ ಅನುವುಮಾಡಿಕೊಟ್ಟು ತನ್ನ ಸಾಂಸ್ಕೃತಿಕ ಸಾರ್ವಭೌಮತ್ವವನ್ನು ಮತ್ತಷ್ಟು ಹೆಚ್ಚಿಸಿಕೊಂಡು ಮೆರೆಯಿತೆನ್ನಬಹುದು. ಹೀಗೆ 220 ವರ್ಷಗಳ ಸುದೀರ್ಘ ಆಡಳಿತ ನಡೆಸಿದ ವಿಜಯನಗರದ ರಾಜವಂಶಗಳು ಧಾರ್ಮಿಕ, ರಾಜಕೀಯ, ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ವಲಯಗಳಲ್ಲಿ ಸಲ್ಲಿಸಿದ ಸೇವೆ ಅವಿಸ್ಮರಣೀಯ.*

**ಮುಖ್ಯಪದಗಳು (Keywords):** ಹಂಪಿ, ಹಂಪಿಯ ಸ್ಮಾರಕಗಳು, ಆದಿಮ ನೆಲೆಗಳು, ವಿಜಯನಗರ ಸಾಮ್ರಾಜ್ಯ.

## ಪೀಠಿಕೆ

**1**336 ರಿಂದ 1575ರ ವರೆಗೆ ದಕ್ಷಿಣ ಭಾರತದ ಇತಿಹಾಸದಲ್ಲಿ ಬೆಳಕಾಗಿ ಬೆಳಗಿದ ವಿಜಯನಗರ ಸಾಮ್ರಾಜ್ಯ ಕರ್ನಾಟಕದ ಸಾಂಸ್ಕೃತಿಕ ಲೋಕಕ್ಕೆ ಒಂದು ಮಹತ್ವದ ಕೊಡುಗೆ. ಅಲ್ಲದೆ ಆ ಕಾಲ ಕರ್ನಾಟಕದ ಪಾಲಿಗೆ ಸುವರ್ಣಯುಗ ಕೂಡ. ಹೊಯ್ಸಳ ಸಾಮ್ರಾಜ್ಯ ದುರ್ಬಲವಾಗುತ್ತ ನಡೆದಾಗ, ಸಂಗಮ ಪುತ್ರರು ಸ್ವತಂತ್ರ ರಾಜ್ಯ ಕಟ್ಟುವ ಯೋಜನೆ ಹಾಕಿಕೊಂಡರು. ಆ ಮೂಲಕ 1336ರಲ್ಲಿ ರಾಜ್ಯಸ್ಥಾಪನೆ ಮಾಡಿದರು ಎಂಬುದು ಇತಿಹಾಸ ಪ್ರತೀತವಾದ ಮಾತು. ಸುಮಾರು 220 ವರ್ಷಗಳ ಕಾಲ ಅತಿ ವೈಭವದಿಂದ ಬೆಳೆದು ಬಾಳಿದ ಈ ಸಾಮ್ರಾಜ್ಯದಲ್ಲಿ ಕ್ರಮವಾಗಿ ಸಂಗಮ, ಸಾಳ್ವ, ತುಳು, ಅರವೀಡು ವಂಶದವರು ಆಳ್ವಿಕೆ ನಡೆಸಿದರು. ಅಂದಿನ ವಿಜಯನಗರ ನೆಲೆಗೊಂಡಿದ್ದು ಹಂಪಿ ಪ್ರದೇಶದ ತುಂಗಭದ್ರಾನದಿಯ ಬಲದಂಡೆಯ ದಕ್ಷಿಣಕ್ಕೆ. ಈ, ಮೊದಲೇ ನದಿಯ ಎಡದಂಡೆಯ ಮೇಲೆ ವಿಜಯನಗರದ ಪೂರ್ವರಾಜಧಾನಿ ಆನೆಗೊಂದಿ ಪ್ರಾಚೀನ ಪಟ್ಟಣವು ಅಸ್ತಿತ್ವದಲ್ಲಿತ್ತು. ಅನಂತರ ಅದು ಹೊಸರಾಜಧಾನಿಯೊಡಗೂಡಿ ಅದರ ಉಪನಗರವಾಗಿ ಬೆಳೆಯಿತು. ವಿಜಯನಗರದ ರಾಜಧಾನಿಯ

*Please cite this article as: ಚಲುವರಾಜು.* (2023). ಹಂಪಿಯ ಸ್ಮಾರಕಗಳು ಹಾಗೂ ಆದಿಮ ನೆಲೆಗಳು. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 5(2). ಪು.ಸಂ.* 1–8

ಸ್ಥಳವಾದ ಹಂಪಿ, ಪೌರಾಣಿಕ ಹಾಗೂ ಪುಣ್ಯಕ್ಷೇತ್ರದ ಹಿನ್ನೆಲೆಯಲ್ಲಿ ರಾಮಾಯಣದ ಕಿಷ್ಕಿಂದಾ ಪ್ರದೇಶವಾಗಿ, ಸೃಷ್ಟಿ ಪುರಾಣಗಳ ನೆಲೆಯಾಗಿ, ಪಂಪಾಕ್ಷೇತ್ರವಾಗಿ, ಪ್ರಾಚೀನತೆಯನ್ನು ಪಡೆದುಕೊಂಡಿದೆ. ಅನಂತರದಲ್ಲಿ ಆನೆಗೊಂದಿ, ವಿರೂಪಾಕ್ಷಪುರ, ಹೊಸಪಟ್ಟಣ, ಹೊಸಹಂಪೆಯ ಪಟ್ಟಣ, ಹಸ್ತಿನಾವತಿ, ಕೂಜರಕೋಣ. ವಿದ್ಯಾನಗರ, ಹಂಪಿ, ಇತ್ಯಾದಿ ಹೆಸರುಗಳಿಂದ ಕರೆಯಲ್ಪಟ್ಟಿದೆ. ಪೌರಾಣಿಕ ಧಾರ್ಮಿಕ ಐತಿಹಾಸಿಕ ಹಿನ್ನೆಲೆಯಲ್ಲಿ ಹೆಚ್ಚಿನ ಮಹತ್ವಪಡೆದ ಈ ನೆಲೆ ಸಾಮ್ರಾಜ್ಯವೊಂದರ ಸ್ಥಾಪನೆಯ ಆಯಾಮಕ್ಕೆ ಅನುವುಮಾಡಿಕೊಟ್ಟು ತನ್ನ ಸಾಂಸ್ಕೃತಿಕ ಸಾರ್ವಭೌಮತ್ವವನ್ನು ಮತ್ತಷ್ಟು ಹೆಚ್ಚಿಸಿಕೊಂಡು ಮೆರೆಯಿತೆನ್ನಬಹುದು. ಹೀಗೆ 220 ವರ್ಷಗಳ ಸುದೀರ್ಘ ಆಡಳಿತ ನಡೆಸಿದ ವಿಜಯನಗರದ ರಾಜವಂಶಗಳು ಧಾರ್ಮಿಕ, ರಾಜಕೀಯ, ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ವಲಯಗಳಲ್ಲಿ ಸಲ್ಲಿಸಿದ ಸೇವೆ ಅವಿಸ್ಮರಣೀಯ. ಇವರ ಆಡಳಿತಕಾಲಕ್ಕೆ ನಿರ್ಮಾಣಗೊಂಡ ಕೋಟೆಕೊತ್ತಲುಗಳು, ದೇವಸ್ಥಾನಗಳು, ಮಂಟಪಗಳು, ಕೆರೆಗಳು, ಬಾವಿಗಳು, ಸೇತುವೆಗಳು, ಅಣೆಕಟ್ಟುಗಳು, ಇಂದಿಗೂ ಮಹತ್ವದವುಗಳೆನಿಸುತ್ತವೆ. ಇವೆಲ್ಲ ಸಾಮ್ರಾಜ್ಯವೊಂದರ ಸಮರ್ಥ ಆಡಳಿತವ್ಯವಸ್ಥೆಯ ಲಕ್ಷಣಗಳೂ ಕೂಡ.

ಈ ಪ್ರದೇಶದಲ್ಲಿ ಯಥೇಚ್ಚವಾಗಿ ಕಂಡುಬರುವ ದೇವಾಲಯಗಳ ಬಗೆಗೆ ಇಲ್ಲಿನ ಜನಪದರು ಹೇಳುವ ಕಥೆಯೊಂದು ಹೀಗಿದೆ. ಈ ಹಿಂದೆ ಹಂಪಿಯಲ್ಲಿ ಹೆಚ್ಚಾಗಿ ನಿರ್ಮಾಣವಾಗಿರುವ ದೇವಾಲಯಗಳು ಮಂಟಪಗಳು ಅಂದು ಈ ಕ್ಷೇತ್ರಕ್ಕೆ ಬರುತ್ತಿದ್ದ ಭಕ್ತರು ಹಾಗೂ ದೊಡ್ಡ ದೊಡ್ಡ ವ್ಯಾಪಾರಗಳಿಂದ ನಿರ್ಮಾಣಗೊಂಡವು ಎಂಬುದಾಗಿ ಕೆಲವು ಮಂಟಪಗಳ ಮೇಲೆ ಇರುವ ಹೆಸರುಗಳಿಂದ ತಿಳಿದುಬರುತ್ತದೆ. ಹೀಗೆ ಹಂಪಿ ಕ್ಷೇತ್ರದಲ್ಲಿ ಗುಡಿಕಟ್ಟಿಸಿದ ವ್ಯಾಪಾರಿ ಭಕ್ತನೊಬ್ಬ ತನ್ನ ಕಡಲೆಕಾಳು ವ್ಯಾಪಾರದಿಂದ ಬಂದ ಲಾಭದಿಂದ ಹಂಪಿಯಲ್ಲಿರುವ ದೇವರುಗಳೆಲ್ಲ ಕಡಲೆಕಾಳು ಗುಗ್ಗರಿಮಾಡಿಸಿ ನೈವೇಧ್ಯ ನೀಡಬೇಕೆಂಬುದಾಗಿ ತೀರ್ಮಾನಿಸಿ, ಒಂದು ದೊಡ್ಡ ಗೋಣಿಚೀಲದ ತುಂಬ ಕಡಲೆಕಾಳು ತಂದು ಅದನ್ನು ಬೇಯಿಸಿ ಗುಗ್ಗರಿ ಮಾಡಿ, ಇಲ್ಲಿನ ಪ್ರತಿಯೊಂದು ಗುಡಿಗೂ ಒಂದೊಂದು ಕಾಳು ಗುಗ್ಗರಿ ನೈವೇದ್ಯ ನೀಡುತ್ತಾ ಬಂದನಂತೆ. ಕೊನೆಗೆ ಗುಗ್ಗರಿ ಮುಗಿದವು ಒಂದು ದೇವತೆ ಉಳಿದುಕೊಂಡಿತು. ಆಗ ಆ ದೇವರು ಎಲ್ಲರಿಗೂ ಗುಗ್ಗರಿ ನೈವೇದ್ಯನೀಡಿ ನನಗೆ ನೀಡಲಿಲ್ಲವಲ್ಲ ಎಂದು ಕೋಪಿಸಿಕೊಂಡು ಎತ್ತರವಾದ ಕಲ್ಲುಗುಂಡನ್ನು ಏರಿಕುಳಿತು ಪ್ರತಿಭಟಿಸಿತು. ಈಚೆ ಹಾಗಾಗಿ ಆ ದೇವರಿಗೆ 'ಗುಗ್ಗರಿ ಗುಂಡಯ್ಯ' ಎಂದು ಕರೆಯುತ್ತಾರೆ. ಗುಡಿ ವಿರೂಪಾಕ್ಷ ದೇವಾಲಯದ ಆವರಣದಲ್ಲಿಯೇ ಇದೆ. ಜನಪದರ ಈ ಮಾತಿನಿಂದ ಹಂಪಿ ಪರಿಸರದಲ್ಲಿ ಸ್ಥಾಪನೆಗೊಂಡಿರ ದೇವಾಲಯಗಳ ಪ್ರಮಾಣವನ್ನು ಅರ್ಥಮಾಡಿಕೊಳ್ಳಬಹುದಾಗಿದೆ. ಹೀಗಾಗಿ ವಿದ್ವಾಂಸರು ಅಭಿಪ್ರಾಯಪಡುವಂತೆ ಯಾವುದೇ ರಾಜವಂಶ ಹೊಸದಾಗಿ ರಾಜ್ಯ ಸ್ಥಾಪನೆ ಮಾಡುವಾಗ ಮೊಟ್ಟಮೊದಲು ಕೈಗೊಳ್ಳುವ ಕಾರ್ಯವೆಂದರೆ ದೇವಾಲಯಗಳ ನಿರ್ಮಾಣ. ಈ ವಿಷಯಕ್ಕೆ ವಿಜಯನರದ ಅರಸರು ಹೊರತಾಗಿಲ್ಲವೆನಿಸುತ್ತದೆ.

ಇಲ್ಲಿನ ಸಪ್ತ ಪರ್ವತಗಳಾದ ಮಾತಂಗ, ಮಾಲ್ಯವಂತ, ಋಷ್ಯಮೂಖ, ಅಂಜನಾದ್ರಿ, ಜಂಬುನಾಥ, ಸೋಮನಾಥ, ಸುಗ್ರೀವಗಿರಿ ಇವು ಈ ಪ್ರದೇಶದ ಸಂರಕ್ಷಣೆಯಷ್ಟೇ ಸೌಂದರ್ಯ ಹಾಗೂ ಸಂಪತ್ತಿನ ಗಣಿಗಳೂ ಹೌದು. ವೈರಿಗಳು ನಗರವನ್ನು ಅಷ್ಟು ಸುಲಭವಾಗಿ ಪ್ರವೇಶಿಸಲಾಗದಂತಹ ದುರ್ಗಮ ಸ್ಥಳಗಳು. ಕೋಟೆಬಾಗಿಲುಗಳ ಮೂಲಕವಲ್ಲದೆ ಬೇರೆಯಾವ ಕಡೆಯಿಂದಲೂ ರಾಜಧಾನಿಯನ್ನು ಪ್ರವೇಶಮಾಡಲು ಸಾಧ್ಯವಾಗದಂತೆ ಇಲ್ಲಿನ ಕೋಟೆ ಕೊತ್ತಲುಗಳು ನಿರ್ಮಾಣಗೊಂಡಿವೆ.

ವಿಜಯನಗರದ ಪೂರ್ವದಲ್ಲಿಯೇ ಚಾಲುಕ್ಯರು ಹಾಗೂ ಹೊಯ್ಸಳರ ವಾಸ್ತುರಚನೆಗಳು ಈ ಪ್ರದೇಶದಲ್ಲಿ ಕಂಡುಬರುತ್ತವೆ. ಉದಾಹರಣೆಗೆ ವಿರೂಪಾಕ್ಷ ದೇವಾಲಯದ ಉತ್ತರ ಭಾಗಕ್ಕಿರುವ ದೇವಾಲಯಗಳ ಸಮುಚ್ಚಯ. ವಿರೂಪಾಕ್ಷ ದೇವಸ್ಥಾನದ ಪೌಳಿಯಲ್ಲಿ ಕಂಡುಬರುವ ಕಡೆದ ಕಲ್ಲಿನ ದುರ್ಗದೇವಿ ದೇವಸ್ಥಾನದ ಭಾಗ ಇತ್ಯಾದಿ.

ಅಂದಿನ ರಾಜರು ತಮ್ಮ ರಾಜಕೀಯ ಚಟುವಟಿಕೆಗಳಿಗೆ ಜನಸಾಮಾನ್ಯರ ಬೆಂಬಲಪಡೆಯಲು ಮೊಟ್ಟ ಮೊದಲಿಗೆ ಹಾಕಿಕೊಳ್ಳುತ್ತಿದ್ದ ಯೋಜನೆಯೆಂದರೆ ದೇವಾಲಯಗಳ ನಿರ್ಮಾಣ, ಇಲ್ಲಿವೆ. ಆಗ ಅಸ್ತಿತ್ವದಲ್ಲಿರುವ ದೇವಾಲಯಗಳಿಗೆ ದತ್ತಿ ನೀಡಿ ಅದನ್ನು ಬೆಲೆಸುವುದು. ಇವು ರಾಜತ್ವ ಅಥವಾ ಒಡೆತನವನ್ನು ಜನಸಾಮಾನ್ಯರ ಮೇಲೆ ಏರಲು ಪುರೋಹಿತಶಾಹಿಗಳು ಬಳಸುತ್ತಿದ್ದ ತಂತ್ರಗಳಾಗಿದ್ದವು. ಹರಿಹರನ ನಂತರ ಅರಸನಾದ ಬುಕ್ಕನ ಕಾಲದಲ್ಲಿ ಹೊಯ್ಸಳ ಶೈಲಿಗಿಂತ ಭಿನ್ನವಾದ ತಮಿಳುನಾಡಿನ ಪ್ರದೇಶದಲ್ಲಿ ಪ್ರಚಲಿತವಿದ್ದ ವಾಸ್ತು ಶೈಲಿಯ ದೇವಾಲಯಗಳನ್ನು ರಚಿಸಲು ಕ್ರಮಕೈಗೊಂಡು ಆ ಶೈಲಿಯ ಅನುಕರಣೆ ದ್ರಾವಿಡ ಶೈಲಿಯ ವರ್ಧನೆಗೆ ಪ್ರಚೋದನೆ ನೀಡಿತು. ಅಲ್ಲದೆ ಹೊಯ್ಸಳ ಮಾದರಿಯ ಶಿಲ್ಪರಚನೆಗೆ ಬೇಕಾದ ದಕ್ಷಿಣ ಕರ್ನಾಟಕದಲ್ಲಿ ದೊರಕುತ್ತಿದ್ದ ಮೃದು ಬಳಪದ ಕಲ್ಲುಗಳ ಪೂರೈಕೆಯ ಸಮಸ್ಯೆ ಹೀಗೆ ಹಲವಾರು ಕಾರಣಗಳಿಂದಾಗಿ ಇದೇ ಪ್ರದೇಶದಲ್ಲಿ ಹೇರಳವಾಗಿ ದೊರಕುವ ಹೊರಟಾದ (ಗ್ರಾನೈಟ್) ಬೆಣಚುಕಲ್ಲುಗಳನ್ನೆ ಕೋಟೆ ಗೋಡೆಯ ಕಲ್ಲಿನಿಂದ ಗರ್ಭಗುಡಿಯ ರಚನೆಗೂ ಮೂರ್ತಿಯರಚನೆಗೂ ಬಳಕೆಮಾಡಿಕೊಳ್ಳಲಾಯಿತು. ಬೆಟ್ಟಗುಡ್ಡಗಳ ಮೇಲೆ ನಿರ್ಮಾಣಗೊಂಡಿರುವ ಕೋಟೆ ಕೊತ್ತಲುಗಳಿಗೆ, ಕಾವಲು ಗೋಪುರಗಳಿಗೆ ಅಕ್ಕಪಕ್ಕದಲ್ಲೇ ರಾಶಿರಾಶಿಯಾಗಿ ಬಿದ್ದ ಬಂಡೆಗಳನ್ನು ಸೀಳಿ ಗಾರೆಗಚ್ಚುಗಳ ಸಹಾಯವಿಲ್ಲದೆ ಕೋಟೆ ಗೋಡೆಗಳ ಮೂಲಕ ಗಾಳಿಯೂ ನುಸುಳದಂತೆ ಕೋಟೆ ನಿರ್ಮಾಣದ ಅವರ ತಂತ್ರಗಾರಿಕೆ ಇವರ ಇನ್ನೊಂದು ಮಹತ್ವದ ಸಾಧನೆಯೇ ಸರಿ.

ರಾಷ್ಟ್ರಕೂಟ, ಚಾಲುಕ್ಯ, ಹೊಯ್ಸಳ ಸಾಮ್ರಾಜ್ಯದ ರಾಜರುಗಳು ಬಹುದೂರದ ಪ್ರದೇಶಗಳಿಂದ ಕಚ್ಚಾ ಶಿಲೆಯನ್ನು ತಂದು ದೇವಾಲಯಗಳನ್ನು ನಿರ್ಮಿಸಿದ ಕೀರ್ತಿಗೆ ಪಾತ್ರರಾದರು. ಆದರೆ ವಿಜಯನಗರದ ಅರಸರು ಇದೇ ಪ್ರದೇಶದಲ್ಲಿ ಯಾವುದೇ ಹೆಚ್ಚಿನ ಸಾಗಾಣಿಕೆಯ ಶ್ರಮವಿಲ್ಲದೆ ಇಲ್ಲಿನ ಬೆಟ್ಟಗುಡ್ಡಗಳಲ್ಲಿನ ಅಕ್ಕಪಕ್ಕದ, ಆಸುಪಾಸಿನ ಬಂಡೆಗಳನ್ನೇ ಸೀಳಿ ಬಹುವಿಶಾಲವಾದ ಹಾಗೂ ತುಂಬ ಎತ್ತರವಾದ ಕಲ್ಲಿನ ಕಂಬಗಳು, ತೊಲೆಗಳು ಹಾಗೂ ಹೊದಿಗೆ ಚಪ್ಪಡಿಗಳನ್ನು ಬಳಸಿ ದೇವಾಲಯಗಲನ್ನು ನಿರ್ಮಾಣ ಮಾಡಿದರು. ತಮಿಳುನಾಡಿನಲ್ಲೂ ಸಹ ಚೋಳರು ಹಾಗೂ ಪಾಂಡ್ಯರು ಬಹುತೇಕ ಇದೇ ಮಾದರಿಯ ಶಿಲೆಯನ್ನು ಬಳಸಿ ದೇವಾಲಯಗಳನ್ನು ಕಟ್ಟಿರುವುದು ಕಂಡುಬರುತ್ತದೆ. ಅಲ್ಲದೆ ಈ ಮೊದಲೆ ಕರ್ನಾಟಕವನ್ನು ಆಳಿದ ಹೊಯ್ಸಳರು, ನೊಳಂಬರು ಮತ್ತು ಚೋಳರು ದ್ರಾವಿಡ ಶೈಲಿಯಲ್ಲಿ ಅನೇಕ ದೇವಾಲಯಗಳು ಹಾಗೂ ಜೈನ ಬಸದಿಗಳನ್ನು ನಿರ್ಮಿಸಿದ್ದರು. ಉದಾ. ಕೋಲಾರ, ತಲಕಾಡು, ಕಂಬದಹಳ್ಳಿ, ಹೇಮಾವತಿ ಇತ್ಯಾದಿ ಸ್ಥಳಗಳಲ್ಲಿ ಈ ಮೊದಲೆ ದ್ರಾವಿಡ ಶೈಲಿಯ ಕೆಲವು ದೇವಾಲಯಗಳು ನಿರ್ಮಾಣಗೊಂಡಿದ್ದವು. ಆದರೂ ಹೊಯ್ಸಳರು ಹಾಗೂ ಚಾಲುಕ್ಯರು ವಾಸ್ತುಶಿಲ್ಪದಲ್ಲಿ ತಮ್ಮದೇ ಆದ ಪ್ರತ್ಯೇಕ ಶೈಲಿಯನ್ನು ಮುಂದುವರಿಸಿಕೊಂಡು ಬಂದರು. ಹೊಯ್ಸಳರ ನಂತರ ವಿಜಯನಗರದ ಅರಸರು ತಮಿಳು ಪ್ರದೇಶವನ್ನು ಆಕ್ರಮಿಸಿಕೊಂಡರು. ತಮಿಳು ಪ್ರದೇಶಗಳನ್ನು ಜಯಿಸುವ ಮುಂಚೆ ಕಂಪಣನು ಮುಲುಬಾಗಿಲು ರಾಜ್ಯದ ಪ್ರಾಂತ್ಯಾಧಿಕಾರಿಯಾಗಿದ್ದನು. ಹೀಗಾಗಿ ಅವನಿಗೆ ಅಲ್ಲಿನ ದ್ರಾವಿಡ ಶೈಲಿಯ ದೇವಾಲಯಗಳ ಪರಿಚಯ ಸಾಕಷ್ಟಿತ್ತು. ಅನಂತರ ಮತ್ತಷ್ಟು ತಮಿಳು ಪ್ರದೇಶಗಳು ಆರ್ಕಾಟ್, ಅಂದರೆ ಚಂಲ್‌ಪೇಟೆ, ಕೊಯಮುತ್ತೂರು, ಸೇಲಂ, ಮಧುರೈ ಇತ್ಯಾದಿ. ಪ್ರದೇಶಗಳು ವಿಜಯನಗರದ ಆಡಳಿತಕ್ಕೆ ಒಳಪಟ್ಟಾಗ ದ್ರಾವಿಡ ಶೈಲಿಯ ದೇವಾಲಯಗಳ ನಿರ್ಮಾಣ ಮತ್ತಷ್ಟು ಹೆಚ್ಚಾಯಿತೆಂದು ಹೇಳಬಹುದು. ಆರಂಭದ ಸಂಗಮವಂಶದ ಅರಸರ ಕಾಲದಲ್ಲಿ ಹಂಪಿಯಲ್ಲಿ ಕೆಲವು ದೇವಾಲಯಗಳು ಕದಂಬ ನಾಗರಶೈಲಿಯಲ್ಲಿ ನಿರ್ಮಾಣಗೊಂಡವು. ಹೇಮಕೂಟ ಬೆಟ್ಟದ ಮೇಲಿನ ಕೆಲವು ಹಾಗೂ ಕಮಲಾಪುರದ ಸಮೀಪದ ಗಾಣಗಿತ್ತಿ ದೇವಸ್ಥಾನ ಇತ್ಯಾದಿ.

ವಿಜಯನಗರ ಸಾಮ್ರಾಜ್ಯದ ಬಗೆಗೆ ದೊರಕುವ ಹಲವಾರು ಮಾಹಿತಿ ಗ್ರಂಥಗಳನ್ನು ಓದುತ್ತಾ ಹೋದಂತೆ ಸಾಮ್ರಾಜ್ಯದ ಹಲವಾರು ದೃಶ್ಯಗಳು ನಮ್ಮ ಕಣ್ಮುಂದೆ ಹಾದುಹೋಗುತ್ತವೆ. ಆದರೆ ಅವುಗಳನ್ನೆಲ್ಲ ಅರ್ಥಮಾಡಿಕೊಂಡು ವಿಜಯನಗರ ಸಾಮ್ರಾಜ್ಯದ ರಾಜಧಾನಿ ಹಂಪಿಗೆ ಪ್ರವೇಶಮಾಡಿದಾಗ, ಅದರಿಂದ ಉಂಟಾಗುವ ಅನುಭವ

ಇನ್ನೊಂದು ಬಗೆಯದು. ಪ್ರಕೃತಿಯ ವಿಕೋಪಕ್ಕೆ ಹಾಗೂ ಸಾಂಸ್ಕೃತಿಕ ಕಾಳಜಿ ಇಲ್ಲದ ಜನರಿಗೆ ಸಿಕ್ಕಿ ಅಲ್ಲಲ್ಲಿ ಕುಸಿದಿರುವ ಕೋಟೆ ಗೋಡೆಗಳು, ಪೂಜೆ ಇಲ್ಲದ ಗುಡಿಗುಂಡಾರಗಳು, ಜೈನ ಬಸದಿಗಳು ಹಲವಾರು ಹಳೆಯ ಮಂಟಪಗಳು ಬುನಾದಿ ಸ್ಥಳಗಳು, ಕಾಲುವೆಗಳು, ಗೋಪುರಗಳು, ಹಾಸು ಬಂಡೆಗಳ ಮೇಲಿನ ಕಾಲುದಾರಿಗಳು.

ಸುಮಾರು ಒಂದರಿಂದ ಎರಡು ಕಿಲೋಮೀಟರ್‌ಗಳಷ್ಟು ಉದ್ದದ ದೊಡ್ಡ ದೊಡ್ಡ ಬಜಾರುಗಳು, ಸುವಿಸ್ತಾರವಾದ ಮಂಟಪ ಹಾಗೂ ದೇವಾಲಯದ ಪೌಳಿಗಳು, ಕಲ್ಯಾಣಿಗಳು, ಅರವಟ್ಟಿಗೆ, ಬಾವಿಗಳು, ಕೆರೆಗಳು, ಸೇತುವೆಗಳು, ಅಣೆಕಟ್ಟಿಗಳು, ಇನ್ನೂ ಸುಸ್ಥಿತಿಯಲ್ಲಿದ್ದು ಉಪಯೋಗಗೊಳ್ಳುತ್ತಿರುವ ಕಾಲುವೆಗಳು, ಸಾವಿರಾರು ಲಿಂಗಗಳು, ನಂದಿ ವಿಗ್ರಹಗಳು, ಹನುಮಂತ, ವೀರಭದ್ರ, ದುರ್ಗಿ, ಕಾಳಿ, ಗಣಪತಿ, ಸತಿಕಲ್ಲು ಹಾಗೂ ವೀರಗಲ್ಲುಗಳು ಇವೆಲ್ಲವೂ ನೋಡುನೋಡುತ್ತಲೇ ಒಮ್ಮೆಗೆ ನಮ್ಮನ್ನು ಮಂತ್ರ ಮುಗ್ಧರನ್ನಾಗಿಸಿಬಿಡುತ್ತವೆ.

ವಿಜಯನಗರ ಸಾಮ್ರಾಜ್ಯದ ರಾಜಧಾನಿ ಹಂಪಿಯಲ್ಲಿ ಹಲವಾರು ದೊಡ್ಡದೊಡ್ಡ ದೇವಾಲಯಗಳು ನಿರ್ಮಾಣಗೊಂಡವು. ಇವುಗಳು ಹೆಚ್ಚಾಗಿ ಬೆಣಚುಕಲ್ಲುಗಳಿಂದ (ಗ್ರಾನೈಟ್‌ಲೇ) ನಿರ್ಮಾಣಗೊಂಡವು. ದೇವಾಲಯದ ಗೋಪುರಗಳು ಸಾಮಾನ್ಯವಾಗಿ ತಮಿಳುನಾಡಿನಲ್ಲಿಯ ಗೋಪುರಗಳ ರೀತಿಯಲ್ಲೇ ಗಾರೆ ಮತ್ತು ಇಟ್ಟಿಗೆಯಿಂದ ನಿರ್ಮಾಣಗೊಂಡಿವೆ. ವಿಜಯನಗರದಲ್ಲಿ ಬಳಸಲ್ಪಟ್ಟಿರುವ ಗ್ರಾನೈಟ್ ಶಿಲೆ ಕುಸುರಿಕೆತ್ತನೆಗೆ ಅಷ್ಟು ಯೋಗ್ಯವಲ್ಲದ ಕಾರಣದಿಂದಾಗಿ ಇದರ ವಾಸ್ತು ಶಿಲ್ಪಗಳಲ್ಲಿ ಹೆಚ್ಚಿನ ಕುಸುರಿ ಉಬ್ಬು ಕೆತ್ತನೆಗಳು ನಿರ್ಮಾಣವಾಗಲಿಲ್ಲ ಎಂದೇ ಹೇಳಬೇಕು. ಹಾಗಾಗಿ ಹೊಯ್ಸಳ ಹಾಗೂ ಚಾಲುಕ್ಯ ಶೈಲಿಯ ಶಿಲ್ಪಗಳ ಕುಸುರಿಕೆಲಸ, ನಯನಾಜೂಕನ್ನು ವಿಜಯನಗರದ ವಾಸ್ತುಶಿಲ್ಪದಲ್ಲಿ ಕಾಣಲು ಸಾಧ್ಯವಾಗುವುದಿಲ್ಲ. ಅಲ್ಲದೆ ಇಲ್ಲಿನ ವಿಶಾಲವಾದ ಕಟ್ಟಡ ಹಾಗೂ ಗೋಡೆಗಳ ಮೇಲಿನ ಬೋಳುತನವನ್ನು ನಿವಾರಿಸಲು ಅಲ್ಲಲ್ಲಿ ಭೀತಿಶಿಲ್ಪಗಳು, ಉಬ್ಬುಗೆತ್ತನೆಗಳು, ವಿವಿಧ ಅಲಂಕರಣಗಳು ಗರ್ಭಗುಡಿಯ ಮುಂಬಾಗಿಲಿನ ಅಲಂಕರಣ, ದ್ವಾರಪಾಲಕರು, ದ್ವಾರಂದದ ಮೇಲಿನ ಅಲಂಕಾರಿಕ ಕೆತ್ತನೆಗಳು, ಕುಂಬಾಧಾರಿತ ವಿಶಾಲವಾದ ಮಂಟಪಗಳಲ್ಲಿ ಕಂಬದ ಮೇಲಿನ ಚಿತ್ರಳು, ತಲವಿನ್ಯಾಸದ ಕೆತ್ತನೆ, ತುಂಬ ವೈಶಿಷ್ಟ್ಯಪೂರ್ಣ ಎನಿಸುತ್ತದೆ.

ಇಲ್ಲಿನ ಸ್ಮಾರಕಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ. ಮೂಲತಃ ಹಂಪಿ ಪುಣ್ಯಕ್ಷೇತ್ರ ಎಂಬ ಹಿನ್ನೆಲೆಯಿಂದಲೂ ಇಲ್ಲಿ ಕಂಡುಬರುವ ಹೆಚ್ಚಿನ ಪೌರಾಣಿಕ ವಸ್ತುವಿಷಯಗಳು ಈ ಪರಿಸರದ ಜನಸಾಮಾನ್ಯರ ಬದುಕು, ಸಾಮ್ರಾಜ್ಯದ ಆಳ್ವಿಕೆಯ ಸಂದರ್ಭದ ಮಹತ್ವದ ವಿಚಾರಗಳು ಇಲ್ಲಿನ ಸ್ಮಾರಕಗಳಲ್ಲಿ ವ್ಯಕ್ತಗೊಂಡಿರುವುದನ್ನು ಕಾಣಬಹುದು. ವಿಜಯನಗರದ ಅರಸರು ತಮ್ಮ 220 ವರ್ಷಗಳ ಸುದೀರ್ಘ ಆಡಳಿತ ನಡೆಸಿ ಕರ್ನಾಟಕದ ಇತಿಹಾಸ ಪುಟಗಳಲ್ಲಿ ಅಜರಾಮರವಾಗಿ ಉಳಿಯಲು ಅವರು ನಡೆಸಿದ ಉತ್ತಮ ಆಡಳಿತ, ಜನಸಾಮಾನ್ಯರಲ್ಲಿ ಹೊಂದಿದ್ದ ಅನ್ಯೋನ್ಯ, ಸಂಬಂಧ, ಗಳಸಿದ ಪ್ರೀತಿ ಜನಸಾಮಾನ್ಯರ ಬಗೆಗೆ ರಾಜರು ಹೊಂದಿದ್ದ ಕಾಳಜಿ, ರಾಜಾಶ್ರಯಗಳಲ್ಲಿ ಜನಸಾಮಾನ್ಯರಿಗಿದ್ದ ಸ್ಥಾನಮಾನ, ಜನತೆಗಾಗಿ ರಾಜಪ್ರಭುತ್ವ ತನ್ನನ್ನು ತಾನು ಸಮರ್ಪಿಸಿಕೊಂಡ ಬಗೆಗೆ ತಿಳಿಯುತ್ತದೆ. ಅಲ್ಲದೆ ಅಂದಿನ ಸಾಂಸ್ಕೃತಿಕ ರೀತಿ ನೀತಿಗಳ ಬಗೆಗೆ ಜನಸಾಮಾನ್ಯರೇ ನಿರ್ಮಿಸಿದ ಕೋಟೆ ಕೊತ್ತಲು, ಕೆರೆ, ಬಾವಿ, ಗುಡಿ ಗೋಪುರ, ದೇವಾಲಯ, ಸಾಲುಮಂಟಪಗಳು, ಸತಿಕಲ್ಲು, ವೀರಗಲ್ಲುಗಳಲ್ಲಿ ಅಕ್ಷರ ಜಗತ್ತಿನಿಂದ ದೂರ ಉಳಿದಿದ್ದ ಜನಸಮುದಾಯ, ತಾನು ಅಕ್ಷರಗಳಲ್ಲಿ ಹೇಳಲಾಗದ ತಮ್ಮ ಆ ಕಾಲದ ಸಾಮಾಜಿಕ ಧಾರ್ಮಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಬದುಕಿನ ವಿಚಾರಗಳನ್ನು ಸ್ಮಾರಕ ಶಿಲ್ಪಗಳಲ್ಲಿ ಹಾಗೂ ಭಾವಣಿಗಳ ಮೇಲಿನ ಭಿತ್ತಿಚಿತ್ರಗಳಲ್ಲಿ ಒಡಮೂಡಿಸಿದ್ದಾರೆ. ಹೀಗಾಗಿ ಸ್ಮಾರಕಗಳಲ್ಲಿ ಕಂಡುಬರುವ ಉಬ್ಬುಶಿಲ್ಪಗಳು, ಭಿತ್ತಿಚಿತ್ರಗಳು ಅಂದಿನ ಕಾಲದ ಜನಸಾಮಾನ್ಯರ, ಧಾರ್ಮಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಬದುಕಿನ ವಿಚಾರಗಳನ್ನು ನೇರವಾಗಿ ಹೇಳುವಲ್ಲಿ ಮುಖ್ಯಪಾತ್ರ ವಹಿಸುತ್ತವೆ. ಆದ್ದರಿಂದ ಹಂಪಿಯ ಸ್ಮಾರಕಗಳಲ್ಲಿ ಕಂಡುಬರುವ

ಸ್ಮಾರಕಗಳಲ್ಲಿನ ಶಿಲ್ಪ ಹಾಗೂ ಚಿತ್ರಗಳು ಜನಪದರ ಮನದಾಳದಿಂದ ಅರಳಿ ಅಭಿವ್ಯಕ್ತಗೊಂಡ ಅಂದಿನ ಜನರ ಬದುಕಿನ ಹಲವಾರು ವಿಚಾರಗಳ ಪ್ರತಿರೂಪಗಳು ಹೌದು. ಹಾಗಾಗಿ ವಿಜಯನಗರ ಸಾಮ್ರಾಜ್ಯದ ಸಾಂಸ್ಕೃತಿಕ ಚರಿತ್ರೆಯ ಅಧ್ಯಯನ ಸಂದರ್ಭದಲ್ಲಿ ಇಲ್ಲಿನ ಸ್ಮಾರಕಗಳಲ್ಲಿ ಕಂಡುಬರುವ ಜಾನಪದೀಯ ಅಂಶಗಳು ಅಧ್ಯಯನದ ಮಹತ್ವವನ್ನು ಮತ್ತಷ್ಟು ಹೆಚ್ಚಿಸುವುದರ ಜೊತೆಗೆ ಅದನ್ನು ಅಷ್ಟೇ ಸಮರ್ಥವಾಗಿ ಪುಷ್ಟೀಕರಿಸುವಲ್ಲಿಯೂ ಸಹಾಯಕವಾಗಬಲ್ಲವು.

**ಆದಿಮ ನೆಲೆಗಳು**

ಹಂಪಿಯ ಭೌಗೋಳಿಕ ಪರಿಸರ ವಿಜಯನಗರ ನಿರ್ಮಾಣಕಷ್ಟೇ ಪೂರಕವಾಗಲಿಲ್ಲ. ಆದರೆ ಅದಕ್ಕೂ ಪೂರ್ವದಲ್ಲಿ ಈ ಪ್ರದೇಶ ಆದಿಮಾನವನ ವಾಸದ ನೆಲೆಯಾಗಿತ್ತು. ಇದಕ್ಕೆ ಸಂಬಂಧಿಸಿದಂತೆ ಈ ಪ್ರದೇಶದಲ್ಲಿ ಕಂಡುಬರುವ ಹಲವಾರು ಅವಶೇಷಗಳು ಹಾಗೂ ಆದಿಮ ಸಂಸ್ಕೃತಿಯ ಜನವಸತಿ ನೆಲೆಗಳು ಈಗಾಗಲೆ ಬೆಳಕು ಕಂಡಿವೆ. ಅಲ್ಲದೆ ಬೆಳಕಿಗೆ ಬಾರದ ಇನ್ನೂ ಎಷ್ಟೋ ನೆಲೆಗಳು ವಸ್ತು ವಿಷಯಗಳು ಈ ಪ್ರದೇಶದಲ್ಲಿವೆ.

ಹಂಪಿಯ ವಿರೂಪಾಕ್ಷ ದೇವಾಲಯದ ಹಿಂಭಾಗಕ್ಕೆ ಈಗಿನ ಗಾಯಿತ್ರಿ ಪೀಠದ ಪ್ರದೇಶಕ್ಕೆ ಹೊಂದಿಕೊಂಡಂತೆ ರಸ್ತೆಯ ಬದಿಗೆ ಎರಡು ಬೃಹತ್ ಬಂಡೆಗಳು ಒಂದಕ್ಕೊಂದು ತಲೆ ಅಂಟಿಸಿಕೊಂಡು ಇಲ್ಲಿನ ಅಕ್ಕತಂಗಿಯರ ಕಲ್ಲಿನ ಮಾದರಿಯಂತಿವೆ. ಈ ಕಲ್ಲುಗಳ ಒಳಮೈಯಲ್ಲಿ ಹಲವಾರು ವರ್ಣ ಚಿತ್ರಗಳು ಕಂಡುಬರುತ್ತವೆ. ಅವುಗಳಲ್ಲಿ ಗೂಳಿ, ಜಿಂಕೆ ಹಾಗೂ ಪ್ರಾಣಿಗಳ ಗುಂಪು, ಬೇಟೆಯಾಡುತ್ತಿರುವ ಮಾನವನ ಚಿತ್ರಗಳನ್ನು ಬಿಡಿಸಲಾಗಿದೆ. ಇಲ್ಲಿನ ಕೆಲವು ಚಿತ್ರಗಳು ನಿಸರ್ಗದ ದಾಳಿಗೆ ತುತ್ತಾಗಿದ್ದರೂ ತಾಳ್ಮೆಯಿಂದ ವೀಕ್ಷಿಸಿದರೆ ಮಾತ್ರ ನಮ್ಮ ದೃಷ್ಠಿಗೆ ನಿಲುಕುತ್ತವೆ.

ಹಂಪಿಯ ವಿಜಯವಿಠಲನ ಗುಡಿಯ ಸಮೀಪದಲ್ಲಿ ಪೂರ್ವಕ್ಕೆ ತುಂಗಭದ್ರ ನದಿಯ ಬಲದಂಡೆಗೆ ಹೊಂದಿಕೊಂಡಂತಿರುವ ಮಾಸ್ಲಯ್ಯನ ಗುಡ್ಡ. ದೊಡ್ಡದೊಡ್ಡ ಬಂಡೆಗಳು ಹಾಗೂ ಗವಿಗಳಿಂದ ಕೂಡಿದ ದುರ್ಗಮ ಸ್ಥಳ. ಇದನ್ನು ಪ್ರವೇಶಿಸಲು ಕಾಲುದಾರಿಗಳಿಗೆವೆ. ಗುಡ್ಡವನ್ನು ಪ್ರವೇಶಮಾಡಿದರೆ ಗುಡ್ಡದ ಮೇಲೆ ಸುಮಾರು ಎರಡು ಮೂರು ಎಕರೆಯಷ್ಟು ವಿಸ್ತಾರವಾದ ಸಮತಟ್ಟಾದ ಪ್ರದೇಶವಿದೆ. ಸುತ್ತಲೂ ಕಲ್ಲು ಬಂಡೆಗಳು ಕೋಟೆಕಟ್ಟಿದಂತಿವೆ. ಸ್ವಲ್ಪಮುಂದೆ ಹೋದರೆ ಅಂಗಳದ ಮಧ್ಯದಲ್ಲಿ ಒಂದರ ಮೇಲೊಂದರಂತೆ ಕುಳಿತ ದೊಡ್ಡ ಬಂಡೆಗಳು ಉತ್ತರದಿಕ್ಕಿಗೆ ನೆಲದ ಮಟ್ಟದಿಂದ ಸುಮಾರು 30 ಅಡಿಗಳಷ್ಟು ಎತ್ತರದಲ್ಲಿ ಬಂಡೆಯ ಇಳಿಜಾರಿಗೆ ದೊಡ್ಡದಾದ ಗೂಳಿಯ ವರ್ಣಚಿತ್ರ ಕಂಡುಬರುತ್ತದೆ. ಅಲ್ಲದೆ ಈ ಪ್ರದೇಶದಲ್ಲಿ ನಡೆಸಿದ ಶೋಧನಾ ಕಾರ್ಯದಿಂದ ಇಲ್ಲಿ ಆದಿಮ ಜನ ನೆಲಸಿದ್ದರೆಂಬುದಕ್ಕೆ ಆಧಾರವಾಗಿ ಹಲವಾರು ಅವಶೇಷಗಳನ್ನು ಪತ್ತೆಹಚ್ಚಲಾಗಿದೆ.

ಹಂಪಿಗೆ ಹೊಂದಿಕೊಂಡಂತಿರುವ ತುಂಗಭದ್ರ ನದಿಯ ಎಡದಂಡೆಯ ಪ್ರದೇಶ ಗಂಗಾವತಿ ತಾಲೂಕಿನ ಆನೆಗೊಂದಿ, ಪಂಪ ಸರೋವರ, ಅಂಜನಾದ್ರಿ, ಮಲ್ಲಾಪುರ, ರಾಮಪುರ, ಹನುಮನಹಳ್ಳಿ, ಸಾಣಾಪುರ, ಪ್ರದೇಶಗಳು ರಾಜಕೀಯ ಹಾಗೂ ಆಡಳಿತಾತ್ಮಕವಾಗಿ ಕೊಪ್ಪಳ ಜಿಲ್ಲೆಗೆ ಸೇರಿದ್ದರೂ, ಅವು ಹಂಪಿಯೊಡನೆ ಬೇರ್ಪಡಿಸಲಾಗದ ಸ್ಥಾನಿಕ ಹಾಗೂ ಸಾಂಸ್ಕೃತಿಕವಾದ ಸಂಬಂಧವನ್ನು ಹೊಂದಿವೆ. ವಿಜಯನಗರದ ಮೂಲರಾಜಧಾನಿ ಆನೆಗೊಂದಿ ಎಂಬುದು ಎಲ್ಲರಿಗೂ ತಿಳಿದ ವಿಷಯ. ಆನೆಗೊಂದಿ ಹಂಪಿಯಂತೆ ಐತಿಹಾಸಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ದೃಷ್ಟಿಯಿಂದ ಮತ್ತೊಂದು ಮಹತ್ವದ ಸ್ಥಳ. ಈಗಲೂ ಇಲ್ಲಿರುವ ತಳವಾರಘಟ್ಟ, ಗಟ್ಟಿಕೋಟೆ, ಚಿಂತಾಮಣಿ ಮಠ, ನವಬೃಂದಾವನ, ವಾಲಿಕಾಷ್ಟ, ತಾರಾಬೆಟ್ಟ, ದುರ್ಗದೇವಸ್ಥಾನ, ಪಂಪಸರೋವರ, ಅಂಜನಾದ್ರಿ, ಇತ್ಯಾದಿ ಹಲವಾರು ಮಹತ್ವದ ಸ್ಥಳಗಳು ಕಂಡುಬರುತ್ತವೆ. ಪ್ರಕೃತಿಯೇ ನಿರ್ಮಿಸಿದ ಇಲ್ಲಿನ ಬೆಟ್ಟಗುಡ್ಡಗಳು ನದಿಪಾತ್ರ ಈ ಪ್ರದೇಶವನ್ನು ವಿಜಯನಗರದ ರಾಜಧಾನಿಯಾಗಿಸಿದಂತೆ, ಆದಿಮ ಜನರ ನೆಲೆಯಾಗಿತ್ತೆಂಬುದನ್ನು ಇಲ್ಲಿ ದೊರಕುವ ಹಲವಾರು

ಸಾಕ್ಷ್ಯಾಧಾರಗಳು ಪುಷ್ಟೀಕರಿಸುತ್ತವೆ. ಹಂಪಿಯಿಂದ ತಳವಾರಘಟ್ಟದ ಮೂಲಕ ನದಿದಾಟಿ ಆನೆಗೊಂದಿಯನ್ನು ಪ್ರವೇಶಿಸುವಾಗ ಎಡಭಾಗಕ್ಕೆ ಕಲ್ಲು ಬಂಡೆಗಳ ರಾಶಿಯ ಬೆಟ್ಟಸಾಲು, ಈ ಬೆಟ್ಟಸಾಲು ನದಿಗೆ ಹೊಂದಿಕೊಂಡಂತಿದ್ದು, ಇನ್ನು ಸುಸ್ಥಿತಿಯಲ್ಲಿರುವ ಸುಂದರವಾದ ಕಲ್ಲಿನ ಕೋಟೆ ಬೆಟ್ಟಸಾಲಿನ ಉದ್ದಕ್ಕೂ ನಿರ್ಮಾಣಗೊಂಡಿದೆ. ಈ ಪ್ರದೇಶಕ್ಕೆ **'ಘಟ್ಟಿಕೋಟೆ'** ಎಂದೂ ಕರೆಯುತ್ತಾರ. ಈ ಬೆಟ್ಟದ ಮೇಲಿನ ದುರ್ಗದೇವಸ್ಥಾನಕ್ಕೆ ಹೋಗುವ ಕಾಲು ದಾರಿ ಇದ್ದು, ಅದರ ಬದಿಗೆ ಗವಿಗಳು ಬಂಡೆಯ ಜಾಡುಗಳು ಕಂಡುಬರುತ್ತವೆ. ಇಂತಹ ಬಂಡೆ ಜಾಡುಗಳಲ್ಲಿ ಆದಿಮ ಜನರು ಬಿಡಿಸಿದ ಹಲವಾರು ಬಿಳಿಯ ಹಾಗೂ ಕೆಂಬಣ್ಣದ ಮನುಷ್ಯ, ಪ್ರಾಣಿ, ಪಕ್ಷಿ ಇತ್ಯಾದಿ ಬಗೆಯ ಹಲವಾರು ಚಿತ್ರಗಳು ಕಂಡುಬರುತ್ತವೆ. ಇದಕ್ಕೆ ಸಮೀಪದಲ್ಲಿ ಬೆಟ್ಟದ ನದಿಯ ಹಂಚಿಗೆ ಹೊಂದಿಕೊಂಡಂತೆ ಸ್ವಲ್ಪ ಸಮತಟ್ಟಾದ ಪ್ರದೇಶವಿದೆ. ಇಲ್ಲಿ ಒಂದು ಬೃಹತ್‌ಗಾತ್ರದ ಬಂಡೆ ಇದೆ. ಈ ಬಂಡೆಯ ಇಳಿಬಾರಿಗೆ ಗೂಳಿಯೊಂದರ ತಲೆಯನ್ನಷ್ಟೆ ಬಿಡಿಸಿದ ಚಿತ್ರವಿದೆ.

ಬೆಟ್ಟದ ಮೇಲಿನ ದುರ್ಗದೇವಸ್ಥಾನಕ್ಕೆ ಪ್ರವೇಶಮಾಡುವ ದಾರಿಯಲ್ಲಿ ಅಂದರೆ ಕೋಟೆ ದ್ವಾರದ ಬಾಗಿಲಿನ ಸಮೀಪದಲ್ಲಿ ಬಂಡೆಯೊಂದರ ಇಳಿಜಾರಿಗೆ ಬಿಡಿಸಿರುವ ಮನುಷ್ಯರ ಹಾಗೂ ಪ್ರಾಣಿಗಳ ಚಿತ್ರಗಳು, ಬೇಟೆಯಾಡುತ್ತಿರುವ ಚಿತ್ರಗಳು ಕಂಡುಬರುತ್ತವೆ. ಇವು ಸಹ ಸಾವಿರಾರು ವರ್ಷಗಳಿಂದ ನಿಸರ್ಗದ ವಿಕೋಪಕ್ಕೆ ತುತ್ತಾಗಿ ಶಿಥಿಲಗೊಂಡಿದ್ದು ಮುಸುಕುಮುಸುಕಾಗಿ ಕಾಣಿಸುತ್ತವೆ.

ಆನೆಗೊಂದಿಯಿಂದ ಪಂಪಸರೋವರಕ್ಕೆ ಹೋಗುವ ದಾರಿಯ ಮಧ್ಯದಲ್ಲಿ ರಾಮಪುರ, ಮಲ್ಲಾಪುರಕ್ಕೆ ಹೋಗುವ ದಾರಿಯಿದೆ. ಈ ದಾರಿಯಲ್ಲಿ ಸುಮಾರು ಎರಡು ಕಿ.ಮೀ. ದೂರ ಸಾಗಿದರೆ 'ಒನಕೆ ಕಿಂಡಿ' ಎಂಬ ಸ್ಥಳವಿದೆ. ಮುಖ್ಯ ರಸ್ತೆಯಿಂದ ಸುಮಾರು 50 ಮೀಟರ್ ಅಂತರದಲ್ಲಿ ರಸ್ತೆಯಿಂದ ಎಡಬದಿಗೆ ಕಂಡುಬರುತ್ತದೆ. ಈ ಪ್ರದೇಶಕ್ಕೆ ನುಸುಳಿ ಹೋಗಲು ಒಬ್ಬ ವ್ಯಕ್ತಿಮಾತ್ರ ಏಕಕಾಲಕ್ಕೆ ಹೋಗಬಹುದು. ಹಾಸುಪಾಸಿನಲ್ಲಿ ಬೃಹತ್ ಬಂಡೆಗಳ ರಾಶಿ. ಹೀಗಾಗಿ ಈ ಬಂಡೆಗಲಲ್ಲಿನ ಈ ಸ್ಥಳಕ್ಕೆ 'ಒನಕೆ ಕಿಂಡಿ' ಎಂಬುದಾಗಿ ಜನಸಾಮಾನ್ಯರು ಕರೆಯುತ್ತಾರೆ. ಹೊರಗಿನಿಂದ ನೋಡಲು ಸಾಮಾನ್ಯ ಗುಡ್ಡದಂತೆ ಕಂಡುಬರುತ್ತದೆ. ಈ ಒನಕೆ ಕಿಂಡಿಯಿಂದ ಮುಂದೆ ಸಾಗಿ ಒಳಹೊಕ್ಕರೆ ಕಣ್ಣುಗಳಿಗೆ ಮನಸ್ಸಿಗೆ ಮತ್ತಷ್ಟು ಮುದ ನೀಡುವ ಪ್ರಕೃತಿ ನಿರ್ಮಿತ ಶಿಲಾ ಸೌಂದರ್ಯರಾಶಿ.

ಸುತ್ತಲೂ ಕಲ್ಲುಗಳ ರಾಶಿಯಿಂದ ನಿರ್ಮಾಣವಾದ ಬೆಟ್ಟಸಾಲು ಮಧ್ಯಭಾಗದಲ್ಲಿ ಸುಮಾರು 6 ಎಕರೆಗಳಷ್ಟು ವಿಶಾಲವಾದ ಸಮತಟ್ಟಾದ ಮೈದಾನ ಪ್ರದೇಶ. ನೀರಿನ ಬಾವಿಯೊಂದು ಗುಡ್ಡದ ಮೇಲಿದೆ. ಸಮತಟ್ಟಾದ ಈ ಮೈದಾನ ಪ್ರದೇಶದ ಸುತ್ತಲೂ ಬೆಟ್ಟದ ಬುಡಗಳಲ್ಲಿ ದೊಡ್ಡ ದೊಡ್ಡ ಗವಿಗಳಿವೆ. ಇಲ್ಲಿನ ಗವಿಗಳ ಬಾಗಿಲಿನ ಮೇಲ್ಛಾಚಿನ ಬಂಡೆ ಹಾಗೂ ಎಡಬಲದ ಬಂಡೆಗಳ ಮೇಲೆ ಸಾಲು ಕಟ್ಟಿನಿಂತಿರುವ ಮನುಷ್ಯರ ಚಿತ್ರಗಳು. ಜೋಡಿ ಮನುಷ್ಯರ ಚಿತ್ರಗಳು. (ಗಂಡು ಹೆಣ್ಣುಗಳನ್ನು ಸಂಕೇತಿಸುವಂತಿವೆ). ಬೇಟೆಯಾಡುತ್ತಿರುವ ಚಿತ್ರಗಳು ಈಟಿ, ಬಿಲ್ಲುಬಾಣಗಲನ್ನು ಹಿಡಿದು ಬೇಟೆಯಾಡುತ್ತಿರುವ ಚಿತ್ರಗಳು, ಗೋಗ್ರಹಣದ ಚಿತ್ರಗಳು, ಪ್ರಾಣಿಚಿತ್ರಗಳು ಅವುಗಳಲ್ಲೂ ವಿಶೇಷವಾಗಿ ಗೂಳಿ, ಜಿಂಕೆ, ಕುದುರೆ, ನವಿಲು, ಕಾಡುಕೋಳಿ, ಇತ್ಯಾದಿ. ಪ್ರಾಣಿಪಕ್ಷಿಗಳ ನೂರಾರು ಚಿತ್ರಗಳು ಗವಿಯ ದ್ವಾರದ ಆಸುಪಾಸಿನಲ್ಲಿ ಕಂಡುಬರುತ್ತವೆ. ಅಲ್ಲದೆ ಮುಖ್ಯ ಗವಿಯೊಂದರ ಮೇಲ್ಭಾಗದ ಕಲ್ಲಿಗೆ ಗವಿಯೊಳಗೆ ಸೇರಿಕೆಯಾಗುವಂತೆ ಸುಮಾರು 8–10 ಅಡಿಗಳಷ್ಟು ಉದ್ದದ ಹಾವಿನ ಚಿತ್ರ ಕಂಡುಬರುತ್ತದೆ.

ಅಲ್ಲದೆ ಚಾಚುಬಂಡೆಯ ಭಾಗದಲ್ಲಿನ ಚಿತ್ರವೊಂದು ತುಂಬ ವಿಶಿಷ್ಟವಾಗಿ ಕಂಡುಬರುತ್ತದೆ. ಸುತ್ತಲೂ ವೃತ್ತಾಕಾರವಾಗಿ ಕಲ್ಲುಗುಂಡುಗಳನ್ನು ಇಟ್ಟಂತ್ತೆ ಇದ್ದು ಮಧ್ಯ ಭಾಗದಲ್ಲಿ ಮನುಷ್ಯನ ಮಲಗಿರುವ ಚಿತ್ರವಿದ್ದು ಇದರ ಸುತ್ತಲೂ ವೃತ್ತಾಕಾರದ ಚಿತ್ರವನ್ನು ಬಿಡಿಸಿದ್ದಾರೆ. ಇದು ಅವರ ಶವ ಸಂಸ್ಕಾರದ ಸ್ಥಳದ ಸಂಕೇತ ವಿರಬಹುದೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಮುಖ್ಯ ಗವಿಗೆ ಪರಸ್ಪರ ಎದುರಾಗಿ ಕಂಡುಬರುವ ಸುಮಾರು 100 ಮೀಟರ್ ದೂರದಲ್ಲಿನ ಗವಿಗಳಲ್ಲಿಯೂ ಸಹ ಹಲವಾರು ಪ್ರಾಣಿ ಹಾಗೂ ಮನುಷ್ಯ ಚಿತ್ರಗಳು ಕಂಡುಬರುತ್ತವೆ. ಇದನ್ನು ಗೋಗ್ರಹಣ ಅಥವಾ ಗೋವುಗಳನ್ನು ಹಿಡಿಯುವುದನ್ನು ಸೂಚಿಸುವ ಚಿತ್ರಗಳೆಂದು ಕರೆಯುತ್ತಾರೆ.

ಪಕ್ಕದಲ್ಲೇ ಎತ್ತರವಾದ ಬಾಚುಬಂಡೆಗೆ ಸುಮಾರು 3 ಅಡಿಗಳಷ್ಟು ಉದ್ದದ ನಿಂತ ಭಂಗಿಯ ಮನುಷ್ಯನ ಚಿತ್ರವೊಂದು ಕಂಡುಬರುತ್ತದೆ. ಹೀಗೆ ಇಲ್ಲಿನ ಗವಿಗಳಲ್ಲಿ ಸಾಕಷ್ಟು ಆದಿಮ ಜನರು ಬಿಡಿಸಿದ ವರ್ಣ ಚಿತ್ರಗಳು ಕಂಡುಬರುತ್ತವೆ. ಕೆಲವು ಸುಸ್ಥಿತಿಯಲ್ಲಿವೆ ಕೆಲವು ಪ್ರಕೃತಿಯ ವಿಕೋಪದಿಂದಾಗಿ ಶಿಥಿಲಗೊಂಡಿವೆ.

ಚಾಚುಬಂಡೆಯ ಭಾಗದಲ್ಲಿನ ಚಿತ್ರವೊಂದು ತುಂಬ ವಿಶಿ,ಟವಾಗಿ ಕಂಡುಬರುತ್ತದೆ. ಸುತ್ತಲೂ ವೃತ್ತಾಕಾರವಾಗಿ ಕಲ್ಲುಗುಂಡುಗಳನ್ನು ಇಟ್ಟಂತ್ತೆ ಇದ್ದು ಮಧ್ಯ ಭಾಗದಲ್ಲಿ ಮನುಷ್ಯನ ಮಲಗಿರುವ ಚಿತ್ರವಿದ್ದು ಇದರ ಸುತ್ತಲೂ ವೃತ್ತಾಕಾರದ ಚಿತ್ರವನ್ನು ಬಿಡಿಸಿದ್ದಾರೆ. ಇದು ಅವರ ಶವ ಸಂಸ್ಕಾರದ ಸ್ಥಳದ ಸಂಕೇತ ವಿರಬಹುದೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಈ ಪ್ರದೇಶದಲ್ಲಿ ದೊರಕುವ ವಿಶಿಷ್ಟವಾದ ಕಲ್ಲುಗಳನ್ನು 'ಚಕಮಕಿ'ಕಲ್ಲುಗಳೆಂದು ಕರೆಯುತ್ತಾರೆ. ಇವಕ್ಕೆ ಬೆಂಕಿ ಕಲ್ಲು ಎಂಬ ಹೆಸರೂ ಇದೆ. ಈ ಕಲ್ಲಿನ ಚೂರುಗಳು ಇಂದಿಗೂ ಈ ಪ್ರದೇಶದಲ್ಲಿ ದೊರಕುತ್ತವೆ. ಇವುಗಳು ಕಲ್ಲಿನ ಆಯುಧಗಳನ್ನು ತಯಾರಿಸುವಾಗ ಕತ್ತರಿಸಿದ ಚೂರು ಕಲ್ಲುಗಳು ಎಂಬುದಾಗಿ ಅಭಿಪ್ರಾಯ ಪಡಲಾಗುತ್ತವೆ. ಈ ಕಲ್ಲುಗಳ ಬಳಕೆ ಹಾಗೂ ಇವುಗಳ ಗುಣಲಕ್ಷಣಗಲನ್ನು ಗಮನಿಸಿ ಇದು ಸೂಕ್ಷ್ಮ ಶಿಲಾಯುಗ ಸಂಸ್ಕೃತಿಯ ಕುರುಹು ಎಂಬುದಾಗಿ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಅಲ್ಲದೆ ಈ ಪ್ರದೇಶದಲ್ಲಿ ಕಂಡುಬರುವ ವಟಾರದಂತಹ ಗವಿಗಳನ್ನು ಗಮನಿಸಿದರೆ ಈ ಪ್ರದೇಶದಲ್ಲಿ ಜನರ ಗುಂಪೊಂದು ವಾಸವಾಗಿದ್ದಿರಬಹುದೆಂಬ ವಿಷಯವನ್ನು ಸೂಚಿಸುವಂತಿವೆ.

ಕನ್ನಡ ಸಂಸ್ಕೃತಿಯ ಪ್ರತೀಕವಾಗಿ ಹಂಪಿ ಪರಿಸರದಲ್ಲೆ ತಲೆ ಎತ್ತಿರುವ ಕನ್ನಡ ವಿಶ್ವವಿದ್ಯಾಲಯದ ಆವರಣಗಲಲ್ಲೂ ಸಹ ಇಂತಹ ಆದಿಮ ಜನರ ನೆಲೆಯ ಕುರುಹುಗಳು ಕಾಣಬರುತ್ತವೆ. ಇಲ್ಲಿನ ಬುಡಕಟ್ಟು ಅಧ್ಯಯನ ವಿಭಾಗದ ಗಿರಿಸೀಮೆಯಲ್ಲಿನ ಹಾಸುಬಂಡೆಗಳ ಮೇಲೆ ಕೊರೆದ ಪ್ರಾಣಿಗಳ ಹಾಗೂ ಮನುಷ್ಯರ ರೇಖಾಚಿತ್ರಗಳಿವೆ. ಅಲ್ಲದೆ ವಿಶ್ವವಿದ್ಯಾಲಯದ ಆವರಣದಲ್ಲೇ ಗಿರಿಸೀಮೆಯಿಂದ ಪೂರ್ವಕ್ಕೆ ಬಯಲು ವದ್ದೇಗೇರಿ ರಸ್ತೆಯ ಎಡಭಾಗಕ್ಕೆ ಪಕ್ಕದಲ್ಲೇ ಕಂಡುಬರುವ ಬೃಹತ್ ಬಂಡೆಯೊಂದರ ಚಾಚುಭಾಗದಲ್ಲಿ ಗೂಳಿಯ ವರ್ಣಚಿತ್ರ ಕಂಡುಬರುತ್ತದೆ. ಹೀಗೆ ಹಂಪಿ ಕೇವಲ ರಾಜ ಮಹಾರಾಜರ ಅಥವಾ ಧರ್ಮ ಸಂಪ್ರದಾಯಗಳ ಸಾಂಸ್ಕೃತಿಕ ವಿಚಾರಗಳನ್ನಷ್ಟೇ ಒಳಗೊಳ್ಳದೆ ಮನುಕುಲದ ಸಂಸ್ಕೃತಿಯ ಎಲ್ಲಾ ಸ್ಥರಗಳನ್ನು ತನ್ನ ತೋಳತೆಕ್ಕೆಯಲ್ಲಿರಿಸಿ ರಕ್ಷಿಸಿ ಬೆಳೆಸಿದೆ. ಇಂತಹ ಅಪೂರ್ವ ಸ್ಥಳ ಹಾಗೂ ವಿಶೇಷತೆಗಳನ್ನು ಸಂರಕ್ಷಿಸುವುದರ ಜೊತೆಗೆ ಅವುಗಳ ಬಗೆಗೆ ಹೆಚ್ಚಿನ ಅಧ್ಯಯನಗಳು ನಡೆಯಬೇಕಾಗಿದೆ.

**ಪರಾಮರ್ಶನ/ಆಕರ ಗ್ರಂಥಗಳು**


- ಚಲುವರಾಜು. (2001). ಹಂಪಿ ಸ್ಮಾರಕಗಳಲ್ಲಿ ಜಾನಪದೀಯ ಅಂಶಗಳು. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಧ್ರುವನಾರಾಯಣ. (1968). ತುಂಗಭದ್ರಾ ಪರಿಸರದಲ್ಲಿ ಐತಿಹಾಸಿಕ ಮತ್ತು ಧಾರ್ಮಿಕ ಕ್ಷೇತ್ರಗಳು. ***ಇಲ್ಲಿ*** ಜಯತೀರ್ಥ ಪುರೋಹಿತ. (ಸಂ.), *ತುಂಗ ತರಂಗ.* ತುಂಗಭದ್ರ ಯೋಜನೆಯ ಆಡಳಿತಾಧಿಕಾರಿಗಳು.

- ಕೃಷ್ಣಯ್ಯ, ಎಸ್.ಎ. (1992). ಬಾಚಿಗೊಂಡನಹಳ್ಳಿ ಮತ್ತು ಏಣಗಿ ಬಸಾಪುರದ ಜನಪದ ಗೀತೆಗಳು. ಪ್ರಾದೇಶಿಕ ರಂಗ ಕಲೆಗಳ ಕೇಂದ್ರ.
- ನಾಗರಾಜ ಶ ಕಾಳಿ. (1968). ತುಂಗಭದ್ರ ಸೀಮೆಯ ಜನಜೀವನ. ಇಲ್ಲಿ ಜಯತೀರ್ಥ ಪುರೋಹಿತ. (ಸಂ.), *ತುಂಗ ತರಂಗ.* ತುಂಗಭದ್ರ ಯೋಜನೆಯ ಆಡಳಿತಾಧಿಕಾರಿಗಳು.
- ಪುರುಷೋತ್ತಮ ಬಿಳಿಮಲೆ & ಚಲುವರಾಜು. (1996). ಹಂಪಿ ಜಾನಪದ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಸದಾನಂದ ಕನವಳ್ಳಿ (ಅನು.) (1992). *ಮರೆತು ಹೋದ ಸಾಮ್ರಾಜ್ಯ ವಿಜಯನಗರ.* ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ.
- ಶ್ರೀಕಂಠಯ್ಯ. (1983). *ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರ.* ಗೀತಾ ಬುಕ್ ಹೌಸ್.
- ಸೂರ್ಯನಾಥ ಕಾಮತ್. (1984). *ವಿಜಯನಗರ ಕಥೆಗಳು.* ಹಂಸಧ್ವನಿ ಪ್ರಕಾಶನ.
- ಸ್ವಾಮಿ ನಮ್ಮಪ್ಪ. (1981). *ಹಂಪಿ ಹೋಳಿ.* ಮನೋಹರ ಗ್ರಂಥಮಾಲೆ.
- Gupta, S. S. (2010). *Hampi: Discover the Splendours of Vijayanagar*.
- Kambar, C. (2004). *Rocks of Hampi: Poems of Chandrasekhar Kambar*. Sahitya Akademi.
- Suresh, K. M. (1998). *Sculptural Art of Hampi*.